# ದಿನಾಂಕ: 11.12.2014ರಂದು ಕರ್ನಾಟಕ ಮಾಹಿತಿ ಆಯೋಗದ ಮುಖ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು

ಸಭೆಯಲ್ಲಿ ಹಾಜರಿದ್ದವರು :

1. ಶ್ರೀ ಎ.ಕೆ.ಎಂ.ನಾಯಕ್, ಮುಖ್ಯ ಆಯುಕ್ತರು, ಕರ್ನಾಟಕ ಮಾಹಿತಿ ಆಯೋಗ.
2. ಶ್ರೀ ಡಿ.ತಂಗರಾಜ್, ಆಯುಕ್ತರು, ರಾಜ್ಯ ಮಾಹಿತಿ ಆಯೋಗ.
3. ಶ್ರೀ ಎಂ.ಆರ್.ಪೂಜಾರ್, ಆಯುಕ್ತರು, ರಾಜ್ಯ ಮಾಹಿತಿ ಆಯೋಗ.
4. ಶ್ರೀ ಎಲ್.ಕೃಷ್ಣಮೂರ್ತಿ, ಆಯುಕ್ತರು, ರಾಜ್ಯ ಮಾಹಿತಿ ಆಯೋಗ.
5. ಶ್ರೀ ಶಂಕರ್.ಆರ್.ಪಾಟೀಲ್, ಆಯುಕ್ತರು, ರಾಜ್ಯ ಮಾಹಿತಿ ಆಯೋಗ.
6. ಶ್ರೀ ವೃಷಭೇಂದ್ರ ಮೂರ್ತಿ, ಕಾರ್ಯದರ್ಶಿ, ಕರ್ನಾಟಕ ಮಾಹಿತಿ ಆಯೋಗ.
7. ಶ್ರೀ ಶ್ರೀರಾಮರೆಡ್ಡಿ, ಕಾನೂನು ಅಧಿಕಾರಿಗಳು, ಕರ್ನಾಟಕ ಮಾಹಿತಿ ಆಯೋಗ.

ಈ ಕೆಳಕಂಡ ವಿಷಯಗಳನ್ನು ಸಭೆಯಲ್ಲಿ ಚರ್ಚಿಸಲಾಯಿತು.

## 1. ಆಯೋಗದ ವಿಭಾಗೀಯ ಕಚೇರಿಗಳನ್ನು ತೆರೆಯುವ ಬಗ್ಗೆ :

ವಿಷಯವನ್ನು ಪ್ರಸ್ತಾಪಿಸಿದ ಕಾರ್ಯದರ್ಶಿಗಳು ಉನ್ನತ ಮಟ್ಟದ ಸಮಿತಿಯ ಐದನೇ ಸಭೆಯ ಶಿಫಾರಸ್ಸಿಗನುಗುಣವಾಗಿ ಸಿಆಸು.ಇಲಾಖೆ (ಜನಸ್ಪಂದನ)ಯಿಂದ ದಿನಾಂಕ: 24.11.2014ರಂದು ಪತ್ರ ಬಂದಿದ್ದು, ಅದರನ್ವಯ ಮಾಹಿತಿ ಆಯೋಗದಲ್ಲಿ ದಾಖಲಾಗುವ ಪ್ರಕರಣಗಳ ವಿಚಾರಣೆಯನ್ನು ರಾಜ್ಯದ ವಿಭಾಗೀಯ ಮಟ್ಟದಲ್ಲಿಯು ನಡೆಸುವ ಬಗ್ಗೆ ತೀರ್ಮಾನ ಕೈಗೊಳ್ಳಬೇಕೆಂದು ಸಭೆಯನ್ನು ಕೋರಿದರು. ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯ ಮಾಹಿತಿ ಆಯುಕ್ತರು ಪ್ರಸ್ತುತ ಮಾಹಿತಿ ಆಯೋಗದ ಆಯುಕ್ತರುಗಳು ರಾಜ್ಯದ ವಿವಿಧ ಜಿಲ್ಲೆಗಳಿಗೆ ಭೇಟಿ ನೀಡಿ ವಿಚಾರಣೆಗಳನ್ನು ನಡೆಸುತ್ತಿದ್ದು, ಇನ್ನುಮುಂದೆ ವಿಭಾಗೀಯ ಮಟ್ಟದಲ್ಲಿ ಅಂದರೆ ನಾಲ್ಕು ಅಥವ ಐದು ಜಿಲ್ಲೆಗಳಿಗೆ ಸಂಬಂಧಿಸಿದ ಪ್ರಕರಣಗಳನ್ನು ವಿಭಾಗೀಯ ಕೇಂದ್ರಸ್ಥಾನದಲ್ಲಿ ನಡೆಸಬಹುದು ಎಂದು ತಿಳಿಸಿದರು. ಇದಕ್ಕಾಗಿ ಕಾರ್ಯಕ್ರಮದ ವೇಳಾಪಟ್ಟಿಯನ್ನು [calendar of event] ಎಲ್ಲಾ ಆಯುಕ್ತರುಗಳು ಸಿದ್ಧಪಡಿಸಿ ನೀಡುವಂತೆ ಸೂಚಿಸಿದರು.

ಕ್ರಮ : ಎಲ್ಲಾ ಮಾಹಿತಿ ಆಯುಕ್ತರು ಹಾಗೂ ಕಾರ್ಯದರ್ಶಿ

## 2. ಹೊರಗುತ್ತಿಗೆ ನೌಕರರ ಭವಿಷ್ಯ ನಿಧಿಯ ವಂತಿಕೆಯ ಕನಿಷ್ಟ ಮೂಲ ವೇತನ ರೂ.6500/- ರಿಂದ 15000/- ಗಳಿಗೆ ಹೆಚ್ಚಿಸಿರುವುದರ ಹಿನ್ನೆಲೆಯಲ್ಲಿ ಹೊರ ಗುತ್ತಿಗೆ ನೌಕರರಿಗೆ ನೀಡುವ ವಂತಿಕೆಯನ್ನು ಕನಿಷ್ಠ ಪ್ರಮಾಣದಲ್ಲಿ ಹೆಚ್ಚುವರಿ ಮಾಡುವ ಬಗ್ಗೆ.

ವಿಷಯವನ್ನು ಪ್ರಸ್ತಾಪಿಸಿದ ಕಾರ್ಯದರ್ಶಿಗಳು ಸರ್ಕಾರದ ದಿನಾಂಕ: 29.8.2014ರ ಸುತ್ತೋಲೆಯಲ್ಲಿ ನೌಕರರ ಭವಿಷ್ಯ ನಿಧಿಯ ವಂತಿಗೆಯನ್ನು ರೂ.6,500ರಿಂದ ರೂ.15000ಗಳವರೆಗೆ ಹೆಚ್ಚಿಸಿದ್ದು ಇದರಿಂದ ಆಯೋಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ತೀರ್ಪುಬರಹಗಾರರು, ಶೀಘ್ರಲಿಪಿಗಾರರು, ಸಹಾಯಕರು, ಡಿಇಒ/ಬೆರಳಚ್ಚುಗಾರರ ಹುದ್ದೆಗಳ ವಂತಿಕೆಯಿಂದ ಪಿ.ಎಫ್.ಮೊತ್ತವನ್ನು ಹೆಚ್ಚಾಗಿ ಕಡಿತಗೊಳಿಸಬೇಕಾಗಿರುವುದಾಗಿ ತಿಳಿಸಿದರು. ಮುಂದುವರೆದು, ಈ ಹಿನ್ನೆಲೆಯಲ್ಲಿ ನೌಕರರ ನಿವ್ವಳ ವೇತನದಿಂದ ಅಂದಾಜು ರೂ. 1000/-ಗಳಿಂದ 2000/ಗಳಷ್ಟು ಕಡಿತಗೊಳಿಸಬೇಕಾಗಿವುದರಿಂದ ಇದಕ್ಕೆ ಪರ್ಯಾಯವಾಗಿ Consolidated Payಯನ್ನು Basic, VDA, HRA, Special allowance ಎಂದು ವಿಂಗಡನೆ ಮಾಡಬೇಕಾಗಿರುತ್ತದೆ ಎಂದು

ತಿಳಿಸಿದರು. ಅಂತೆಯೇ Minimum Wages Actನಲ್ಲಿ Minimum Wageನ್ನು ಹೆಚ್ಚು ಮಾಡಿರುವುದರಿಂದ ನೌಕರರ ವೇತನವನ್ನು ಅಂದಾಜು ರೂ.300ರಿಂದ ರೂ.600ಗಳನ್ನು ಹೆಚ್ಚಿಸಬೇಕಾಗುತ್ತದೆಯೆಂದು ಸಭೆಗೆ ತಿಳಿಸಿದರು. ಈ ರೀತಿ ವೇತನ ಹೆಚ್ಚಳದಿಂದ ವಾರ್ಷಿಕವಾಗಿ ರೂ. 2,61,600/– ಮತ್ತು ವಾಹನ ಚಾಲಕರು, ದಲಾಯತ್, ಹೋಂ ಆರ್ಡರ್ಲಿ ಮತ್ತು ಸೆಕ್ಯೂರಿಟಿ ಗಾರ್ಡ್ಸ್‌ಗಳ ಹುದ್ದೆಗಳಿಗೆ ವಾರ್ಷಿಕವಾಗಿ ರೂ. 2,94,283/– ಒಟ್ಟು ರೂ. 5,55,883/–ಗಳು ವಾರ್ಷಿಕವಾಗಿ ಹೆಚ್ಚುವರಿಯಾಗುವುದಾಗಿ ತಿಳಿಸುತ್ತಾ ಇದಕ್ಕೆ ಸಂಬಂಧಿಸಿದಂತೆ ಹುದ್ದೆವಾರು ಸಿದ್ದಪಡಿಸಿರುವ ವೇತನ ಹೆಚ್ಚಳದ ತಃಖ್ತೆಯನ್ನು ಸಭೆಗೆ ಮಂಡಿಸುತ್ತಾ ಅನುಮೋದನೆ ಕೋರಿದರು. ಸಭೆ ಅನುಮೋದನೆ ನೀಡಿತು.

**3. ಪ್ರಸ್ತುತ ಚಾಲ್ತಿಯಲ್ಲಿರುವ ಟೆಂಡರ್ ಗುತ್ತಿಗೆದಾರರ ಸೇವಾ ಅವಧಿಯು ದಿನಾಂಕ: 31.12.2014ಕ್ಕೆ ಮುಕ್ತಾಯಗೊಳ್ಳಲಿದ್ದು, 2 ತಿಂಗಳ ಅವಧಿಗೆ ವಿಸ್ತರಿಸುವ ಬಗ್ಗೆ.**

ಪ್ರಸ್ತುತ ಈಗಿರುವ ಗುತ್ತಿಗೆದಾರರ ಗುತ್ತಿಗೆ ಅವಧಿಯು ದಿಸೆಂಬರ್ 2014ಕ್ಕೆ ಮುಕ್ತಾಯಗೊಳ್ಳಲಿದ್ದು, ಹಾಲಿ ಈಗ ಇರವ ದರದಲ್ಲಿಯೇ ಗುತ್ತಿಗೆದಾರರ ಗುತ್ತಿಗೆಯನ್ನು ಎರಡು ತಿಂಗಳ ಅವಧಿಗೆ ವಿಸ್ತರಿಸಲು ಕಾರ್ಯದರ್ಶಿಗಳು ಸಭೆಯ ಅನುಮತಿ ಕೋರಿದರು. ಸಭೆ ಅನುಮೋದನೆ ನೀಡಿತು.

ಕ್ರಮ : ಕಾರ್ಯದರ್ಶಿ

**4. ಹಾಲಿ ಎಲ್ಲಾ ಕೋರ್ಟ್‌ಹಾಲ್‌ಗಳಿಂದ ಟಪಾಲು ಶಾಖೆಗೆ ಬರುತ್ತಿರುವ ಆದೇಶಗಳನ್ನು ಸ್ಪೀಡ್ ಪೋಸ್ಟ್ ಮುಖಾಂತರ ಕಳುಹಿಸುವ ಬಗ್ಗೆ (ಫ್ರಾಂಕಿಂಗ್)**

ವಿಷಯವನ್ನು ಕಾರ್ಯದರ್ಶಿಗಳು ಸಭೆಯಲ್ಲಿ ಮಂಡಿಸುತ್ತಾ, ಕಳೆದ ಸಭೆಯಲ್ಲಿ ಆಯೋಗದಲ್ಲಿ ದಾಖಲಾಗುವ ಪ್ರಕರಣಗಳ ವಿಚಾರಣೆಯ ಪೂರ್ವದಲ್ಲಿ ಹೊರಡಿಸಲಾಗುವ ನಡವಳಿ/ಆದೇಶದೊಂದಿಗೆ ಎಲ್ಲಾ ದಾಖಲಾತಿಗಳನ್ನು ಅಂದರೆ ಅರ್ಜಿ, ಮೇಲ್ಮನವಿ ಮತ್ತು ಪೂರಕ ಮಾಹಿತಿಯನ್ನು ಸಾರ್ವಜನಿಕ ಮಾಹಿತಿ ಅಧಿಕಾರಿಗೆ ರಿಜಿಸ್ಟರ್ಡ್ ಪೋಸ್ಟ್ ಮೂಲಕ ಕಳುಹಿಸಲು ತೀರ್ಮಾನಿಸಲಾಗಿತ್ತು. ಆದರೆ ರಿಜಿಸ್ಟರ್ಡ್ ಪೋಸ್ಟ್ ಮೂಲಕ ದಾಖಲಾತಿಗಳನ್ನು ಕಳುಹಿಸಲು ಫ್ರಾಂಕಿಂಗ್ ಮಾಡುವ ಅವಶ್ಯಕತೆಯಿದ್ದು, ಈ ರೀತಿ ಮಾಡಲು ಹೆಚ್ಚು ದಾಖಲಾತಿಗಳನ್ನು ಲಕೋಟೆಯಲ್ಲಿ ತುಂಬಿ ಫ್ರಾಂಕಿಂಗ್ ಮಾಡಲು ಫ್ರಾಂಕಿಂಗ್ ಯಂತ್ರವು ಕಿರಿದಾದುದರಿಂದ ಸಾಧ್ಯವಾಗುತ್ತಿಲ್ಲವೆಂದು ಸಭೆಗೆ ತಿಳಿಸಿದರು. ನಂತರ ಮಾತನಾಡಿದ ಅವರು ಪ್ರಸ್ತುತ ಆಯೋಗದಲ್ಲಿರುವ ಫ್ರಾಂಕಿಂಗ್ ಯಂತ್ರವೇ ಅಧಿಕ ಗಾತ್ರದಲ್ಲಿದ್ದು ಇದಕ್ಕಿಂತಲೂ ಹೆಚ್ಚಿನ ಗಾತ್ರದ ಯಂತ್ರ ಮಾರುಕಟ್ಟೆಯಲ್ಲಿಲ್ಲದೆ ಇರುವುದರಿಂದ ದಾಖಲಾತಿಗಳನ್ನು ರಿಜಿಸ್ಟರ್ಡ್ ಪೋಸ್ಟ್‌ಗೆ ಬದಲಾಗಿ ಸ್ಪೀಡ್ ಪೋಸ್ಟ್ ಮೂಲಕ ಕಳುಹಿಸುವ ಬಗ್ಗೆ ಸಭೆಯ ತೀರ್ಮಾನವನ್ನು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ಮುಖ್ಯ ಮಾಹಿತಿ ಆಯುಕ್ತರು ಹಾಗೂ ಮಾಹಿತಿ ಆಯುಕ್ತರಾದ ಶ್ರೀ ಡಿ.ತಂಗರಾಜ್ ಅವರು ಸ್ಪೀಡ್‌ಪೋಸ್ಟ್ ಮೂಲಕ ಕಳುಹಿಸಿದರೆ ಸ್ವೀಕೃತಿ ದೃಢೀಕರಣ [acknowledgement] ಸಿಗದೇ ಇರುವ ಕಾರಣ ರಿಜಿಸ್ಟರ್ಡ್ ಪೋಸ್ಟ್ ಮೂಲಕ ಕಳುಹಿಸುವುದೇ ಕ್ರಮ ಬದ್ಧವಾದುದ್ದು ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ಕಾನೂನು ಅಧಿಕಾರಿಗಳು ಸಾರ್ವಜನಿಕ ಮಾಹಿತಿ ಅಧಿಕಾರಿಗೆ ಎಲ್ಲಾ ದಾಖಲಾತಿಗಳನ್ನು ಕಳುಹಿಸುವ ಅವಶ್ಯಕತೆಯಿಲ್ಲವೆಂದು ಕೇವಲ 6(1) ಅರ್ಜಿ ಮತ್ತು ಅಪೀಲು ಮೆಮೊ ಎರಡನ್ನು ಮಾತ್ರ ಕಳುಹಿಸಿದರೆ ಫ್ರಾಂಕಿಂಗ್ ಮಾಡಲು ಅನುಕೂಲವಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಇದಕ್ಕೆ ಸ್ಪಂದಿಸಿದ ಮುಖ್ಯಮಾಹಿತಿ ಆಯುಕ್ತರು ನಿಯಮ 6(1)ರಡಿಯಲ್ಲಿ ಸಲ್ಲಿಸಿರುವ ಅರ್ಜಿ, 19(1)ರಲ್ಲಿ ಸಲ್ಲಿಸಿರುವ ಮೇಲ್ಮನವಿ ಹಾಗೂ 19(3) ರಡಿಯಲ್ಲಿ ಸಲ್ಲಿಸಿರುವ ಅಪೀಲು ಮೆಮೊಗಳನ್ನು ಮಾತ್ರ ಕಳುಹಿಸಿ ಅದಕ್ಕೆ ಸೆಟ್–1 ಅಂತಲೂ ಹಾಗೂ ಅದಕ್ಕೆ

ಸಂಬಂಧಿಸಿದ ಉಳಿದ ದಾಖಲಾತಿಗಳನ್ನು ಸೆಟ್-2 ಎಂತಲೂ ವಿಂಗಡಿಸಿ ಕ್ರಮಬದ್ಧವಾಗಿಡಬೇಕೆಂದು ಸೂಚಿಸಿದರು. ಹಾಗಾಗಿ ಸಾರ್ವಜನಿಕ ಮಾಹಿತಿ ಅಧಿಕಾರಿಗಳಿಗೆ ವಿಚಾರಣಾ ಪೂರ್ವದಲ್ಲಿ ಕಳುಹಿಸುವ ನಡವಳಿ/ಆದೇಶ ಜೊತೆಗೆ 6(1)ರಲ್ಲಿ ಸಲ್ಲಿಸಿರುವ ಅರ್ಜಿ, 19(1)ರಲ್ಲಿ ಸಲ್ಲಿಸಿರುವ ಮೇಲ್ಮನವಿ ಹಾಗೂ 19(3) ರಡಿ ಸಲ್ಲಿಸಿರುವ ಅಪೀಲು ಮೆಮೊಗಳನ್ನು ರಿಜಿಸ್ಟರ್ಡ್ ಪೋಸ್ಟ್ ಮೂಲಕವೇ ಫ್ರಾಂಕಿಂಗ್ ಮಾಡಿ ಕಳುಹಿಸುವಂತೆ ಸಭೆಯಲ್ಲಿ ತೀರ್ಮಾನಿಸಲಾಯಿತು.

ಕ್ರಮ : ಕಾರ್ಯದರ್ಶಿಗಳು, ಅಧೀನ ಕಾರ್ಯದರ್ಶಿಗಳು

## 5. ಅಧೀನ ಕಾರ್ಯದರ್ಶಿಗಳು, ಕಚೇರಿ ಅಧೀಕ್ಷಕರು ಹಾಗೂ ಹೊಸ ಮಾಹಿತಿ ಅಯುಕ್ತರ ವಾಹನ ಚಾಲಕರಿಗೆ ಮೊಬೈಲ್ ಕರೆನ್ಸಿಯನ್ನು ನೀಡುವ ಬಗ್ಗೆ.

ಸಭೆಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸಿದ ಕಾರ್ಯದರ್ಶಿಗಳು ಮಾಹಿತಿ ಆಯೋಗದ ಮುಖ್ಯಮಾಹಿತಿ ಆಯುಕ್ತರು, ರಾಜ್ಯ ಮಾಹಿತಿ ಆಯುಕ್ತರುಗಳು ಹಾಗೂ ಕಾರ್ಯದರ್ಶಿಗಳ ವಾಹನ ಚಾಲಕರಿಗೆ ಮೊಬೈಲ್ ಕರೆನ್ಸಿ ಒದಗಿಸಲಾಗುತ್ತಿದ್ದು ಅಂತೆಯೇ ಪ್ರಸ್ತುತ ಹೊಸದಾಗಿ ಆಯುಕ್ತರಾಗಿ ನೇಮಕಗೊಂಡಿರುವ ಇಬ್ಬರು ಆಯುಕ್ತರುಗಳ ವಾಹನ ಚಾಲಕರು, ಅಧೀನ ಕಾರ್ಯದರ್ಶಿಗಳು ಹಾಗೂ ಕಛೇರಿ ಅಧೀಕ್ಷಕರಿಗೂ ಸಹ ಕರೆನ್ಸಿಯನ್ನು ಒದಗಿಸಲು ಸಭೆಯ ಅನುಮತಿ ಕೋರಿದರು. ಸಭೆ ಅನುಮೋದಿಸಿತು.

ಕ್ರಮ : ಕಾರ್ಯದರ್ಶಿಗಳು, ಅಧೀನ ಕಾರ್ಯದರ್ಶಿಗಳು

## 6. ಇತರೆ ವಿಷಯ:

### 6.1 ಕರ್ನಾಟಕ ಮಾಹಿತಿ ಆಯೋಗದಲ್ಲಿ ಹೊರ ಗುತ್ತಿಗೆ ಆಧಾರದ ಮೇಲೆ 65 ವರ್ಷಗಳಿಗಿಂತಲೂ ಹೆಚ್ಚಿನ ವಯೋಮಿತಿಯವರು ಕರ್ತವ್ಯ ನಿರ್ವಹಿಸುತ್ತಿರುವ ಬಗ್ಗೆ :

ವಿಷಯ ಪ್ರಸ್ತಾಪಿಸಿದ ಕಾರ್ಯದರ್ಶಿಗಳು ಆಯೋಗದಲ್ಲಿ ಕೆಲವು ನೌಕರರ ವಯೋಮಿತಿ 65 ವರ್ಷಗಳಿಗಿಂತಲೂ ಹೆಚ್ಚಾಗಿದ್ದು ಇವರನ್ನು ಮುಂದುವರೆಸುವ ಬಗ್ಗೆ ಸಭೆಯ ಅಭಿಪ್ರಾಯ ಕೋರಿದರು. ಇದಕ್ಕೆ ಪ್ರತಿಕ್ರಿಯಿಸಿದ ರಾಜ್ಯ ಮಾಹಿತಿ ಆಯುಕ್ತರಾದ ಶ್ರೀ ಡಿ.ತಂಗರಾಜ್ ಅವರು ಈಗಾಗಲೇ ಹೊರಗುತ್ತಿಗೆ ನೌಕರರ ವಯೋಮಿತಿಯನ್ನು 65ವರ್ಷಗಳಿಗೆ ಸೀಮಿತಗೊಳಿಸಿ ನಡವಳಿ ಜಾರಿಗೊಳಿಸಲಾಗಿದ್ದು ವಯೋಮಿತಿ ಮೀರಿದ ನೌಕರರ ಸೇವೆಯನ್ನು ಕಡಿತಗೊಳಿಸಬೇಕೆಂದು ತಿಳಿಸಿದರು. ಇದಕ್ಕೆ ಸ್ಪಂದಿಸಿದ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ನೌಕರರನ್ನು ಪ್ರಸ್ತುತ ಗುತ್ತಿಗೆದಾರರ ಗುತ್ತಿಗೆ ಮುಗಿಯೊವರೆಗೆ (ವಿಸ್ತರಿಸಲಾಗಿರುವ ಗುತ್ತಿಗೆ ಅವಧಿ ಸೇರಿದಂತೆ) ಮುಂದುವರೆಸುವಂತೆ ಕಾರ್ಯದರ್ಶಿಗಳಿಗೆ ಸೂಚಿಸಿದರು. ಇದನ್ನು ಸಭೆ ಅನುಮೋದಿಸಿತು.

ಕ್ರಮ : ಕಾರ್ಯದರ್ಶಿಗಳು, ಅಧೀನ ಕಾರ್ಯದರ್ಶಿಗಳು.

### 6.2 ಹೊಸ ಗಣಕಯಂತ್ರಗಳನ್ನು ಖರೀದಿಸುವ ಬಗ್ಗೆ.

ವಿಷಯ ಪ್ರಸ್ತಾಪಿಸಿದ ಕಾರ್ಯದರ್ಶಿಗಳು ಪ್ರಸ್ತುತ ಆಯೋಗದಲ್ಲಿರುವ ಗಣಕಯಂತ್ರಗಳು ಕೆಲವು ಹಳೆಯದಾಗಿದ್ದು ಮತ್ತು ಕೆಲವು ಗಣಕಯಂತ್ರಗಳು ಕೆಟ್ಟು ಹೋಗಿದ್ದು ಅವುಗಳಿಗೆ ಬದಲಾಗಿ ಹೊಸ ಗಣಕಯಂತ್ರಗಳನ್ನು ಖರೀದಿ ಮಾಡುವ ಅವಶ್ಯಕತೆಯಿರುವುದಾಗಿ ಸಭೆಗೆ ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ರಾಜ್ಯ ಮಾಹಿತಿ ಆಯುಕ್ತರಾದ ಶ್ರೀ ಡಿ.ತಂಗರಾಜ್ ಅವರು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಗಣಕಯಂತ್ರಗಳನ್ನು ಏಕಾಏಕಿ ಬದಲಾಯಿಸುವ ಬದಲು ಕೆಟ್ಟು ಹೋಗಿರುವ ಮತ್ತು ತೀರಾ ಹಳೆಯದಾಗಿರುವ ಗಣಕಯಂತ್ರಗಳನ್ನು ಮಾತ್ರ ಬದಲಾಯಿಸುವುದು ಸೂಕ್ತ ಎಂದು ಅಭಿಪ್ರಾಯ ಪಟ್ಟರು. ಇದಕ್ಕೆ ಸ್ಪಂದಿಸಿದ ರಾಜ್ಯ ಮುಖ್ಯಮಾಹಿತಿ ಆಯುಕ್ತರು ಪ್ರಸ್ತುತ ಆಯೋಗದಲ್ಲಿನ ಗಣಕಯಂತ್ರಗಳ ಸ್ಥಿತಿಗತಿಯ ಬಗ್ಗೆ ಇ-ಆಡಳಿತ ಇಲಾಖೆಯಿಂದ ಗಣಕಯಂತ್ರಗಳನ್ನು ಪರೀಕ್ಷಿಸಿ 'ಟೆಕ್ನಿಕಲ್ ಕ್ಲಿಯರೆನ್ಸ್' ಪಡೆದು ತದನಂತರ ಕ್ರಮ ಕೈಗೊಳ್ಳುವಂತೆ ಕಾರ್ಯದರ್ಶಿಗಳಿಗೆ ಸೂಚಿಸಿದರು. ಇದನ್ನು ಸಭೆಯು ಅನುಮೋದಿಸಿತು.

ಕ್ರಮ : ಕಾರ್ಯದರ್ಶಿಗಳು ಹಾಗೂ ಅಧೀನ ಕಾರ್ಯದರ್ಶಿ

**6.3 ಆಯೋಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಾನೂನು ಸಹಾಯಕರ ವೇತನ ಹೆಚ್ಚಳದ ಬಗ್ಗೆ.**

ವಿಷಯ ಪ್ರಸ್ತಾಪಿಸಿದ ಕಾರ್ಯದರ್ಶಿಗಳು ಪ್ರಸ್ತುತ ಆಯೋಗದಲ್ಲಿ ಕಾನೂನು ಸಹಾಯಕರಾಗಿ ಕರ್ತವ್ಯ ನಿರ್ವಹಿಸುತ್ತಿರುವವರ ವೇತನವನ್ನು ರೂ.8000/-ರಿಂದ ರೂ.20000/-ಗಳಿಗೆ ಹೆಚ್ಚಿಸಲು ಸರ್ಕಾರಕ್ಕೆ ಪತ್ರ ಬರೆಯಲಾಗಿದ್ದು, ಸರ್ಕಾರವು ಕಾನೂನು ಸಹಾಯಕರ 'ಜಾಬ್ ಪ್ರೊಫೈಲ್ / ಜಾಬ್ ಚಾರ್ಟ್' ನೀಡುವಂತೆ ಸೂಚಿಸಿರುವುದಾಗಿ ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಕಾನೂನು ಅಧಿಕಾರಿಗಳು ಆಯೋಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಾನೂನು ಸಹಾಯಕರ ಕಾರ್ಯವು ಉಚ್ಚ ನ್ಯಾಯಾಲಯದಲ್ಲಿರುವಂತೆ ಇರುವುದಿಲ್ಲ ಎಂದು ತಿಳಿಸಿದರು. ಇದಕ್ಕೆ ಸ್ಪಂದಿಸಿದ ರಾಜ್ಯ ಮುಖ್ಯ ಮಾಹಿತಿ ಆಯುಕ್ತರು, ಪ್ರಸ್ತುತ ಆಯೋಗದಲ್ಲಿನ ಕಾನೂನು ಸಹಾಯಕರಿಂದ ಅಗತ್ಯ ಕಾರ್ಯನಿರ್ವಹಣೆಯಾಗುತ್ತಿದೆಯೇ ಎಂಬುದನ್ನು ತಿಳಿಕೊಂಡು ಉಚ್ಚ ನ್ಯಾಯಾಲಯದಲ್ಲಿರುವಂತೆ ಕಾನೂನು ಸಹಾಯಕರ ಸೇವೆಯನ್ನು ಸಂಪೂರ್ಣವಾಗಿ ಪಡೆಯಲು ಸಾಧ್ಯವಿದೆಯೇ ಎಂದು ಪರಿಶೀಲಿಸಿ ಜಾಬ್ ಚಾರ್ಟ್ ತಯಾರಿಸಿ ಸಲ್ಲಿಸುವಂತೆ ಕಾರ್ಯದರ್ಶಿಗಳಿಗೆ ಸೂಚಿಸಿದರು.

ಸಭೆಯಲ್ಲಿ ಕೈಗೊಂಡ ತೀರ್ಮಾನಗಳನ್ವಯ ಕ್ರಮ ಕೈಗೊಳ್ಳುವಂತೆ ಕಾರ್ಯದರ್ಶಿಗಳಿಗೆ ಸೂಚಿಸುತ್ತಾ ರಾಜ್ಯ ಮುಖ್ಯಮಾಹಿತಿ ಆಯುಕ್ತರು ಎಲ್ಲರಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ರಾಜ್ಯ ಮುಖ್ಯ ಮಾಹಿತಿ ಆಯುಕ್ತರು

*************